ಮಾಡಿಬಿಡಬೇಕೆಂದು ಆತುರಪಡ್ತಿದ್ದೀರಿ. ಮೊದಲು ನಿಮ್ಮ ಮಗನಲ್ಲಿ ಏನಾದ್ರೂ ಇದೆಯೋ ಇಲ್ಲವೋ ತಿಳ್ಕೊಳ್ಳಿ ನೀವು. ಒಂದು ವೇಳೆ ಏನಾದರೂ ಇದ್ದರೆ ಆಮೇಲೆ ಅದನ್ನು ಯಾರಾದರೂ ಸಾಣೆ ಹಿಡೀತಾರೆ. ಅಷ್ಟೇ ಅಲ್ಲದೆ ಸುಮ್ಮನೆ ವ್ಯರ್ಥವಾಗಿ ಓಡಾಡಿದರೆ ಏನೂ ಲಾಭವಿಲ್ಲ.'

ಆಕೆ ಎದುರು ಮಾತಾಡಲಿಲ್ಲ.

ತುಂಬಾ ಹೊತ್ತಿನವರೆಗೆ ಎಚ್ಚರವೇ ಇಲ್ಲದವಳಂತೆ ಕಾರು ನಡೆಸುತ್ತಾ ಇದ್ದುಬಿಟ್ಟಳು.

ಇನ್ನು ನನಗೆ ಅರ್ಥವಾಗಿ ಹೋಯಿತು. ಈ ಕತೆ ಇಲ್ಲಿಗೆ ಮುಗಿಯಿತೆಂದು. ನಾಳೆಯಿಂದ ಬಹುಶಃ ಆಕೆ ನನ್ನನ್ನಾಗಲಿ, ನಾನು ಆಕೆಯನ್ನಾಗಲಿ ಭೇಟಿಯಾಗಲಿಕ್ಕಿಲ್ಲ. ಅಷ್ಟಾದರೆ ಸಾಕು. ಅದೇ ನನ್ನ ಕೋರಿಕೆ. ಆದರೆ ಆದದ್ದೇ ಬೇರೆ.

'ನನ್ನ ಬಗ್ಗೆ ಏನು ಗೊತ್ತೂಂತ ನೀವು ಹೀಗೆಲ್ಲ ಮಾತಾಡಿದಿರ್ರಿ. ನಿಮ್ಮ ಹೆಲ್ಪ್ ಕೇಳಿದೆ ಅಂತ ತಾನೇ ಈ ತಿರಸ್ಕಾರ' ಅಂದಳಾಕೆ ಇದ್ದಕ್ಕಿದ್ದಂತೆ.

ಆಕೆಯ ದನಿ ಗಡುಸಾಗಿ, ಗಂಟಲು ಕಟ್ಟಿಕೊಂಡಂತೆ ಬರುತ್ತಿತ್ತು. ಅದನ್ನು ನಾನು ಗಮನಿಸಿದೆ. ಆದರೆ ಈಗ ಹಿಂದೆ ಸರಿಯುವುದು ಒಳ್ಳೆಯ ಲಕ್ಷಣ ಅಲ್ಲ.

'ಇದರಲ್ಲಿ ತಿರಸ್ಕಾರ ಏನೂ ಇಲ್ಲ. ವಾಸ್ತವ ಹೇಳಿದೆ.'

'ಏನು ವಾಸ್ತವ.'

'ನಿಮಗೆ ಅರ್ಥವಾಗಬೇಕಾದ ವಾಸ್ತವ. ಸಂಜೆಯಿಂದ ನೋಡ್ತಿದೀನಲ್ಲ, ನೀವು ಮುಂದಕ್ಕೆ ಧಾವಿಸುತ್ತಿದ್ದೀರಿ. ನಿಮ್ಮ ಮಗ ಮಾತ್ರ ಹಿಂದಿನ ಸೀಟಿನಲ್ಲಿ ಕುಳಿತು ಮೊಬೈಲ್ ಫೋನಿನೊಂದಿಗೆ ತಗುಲಾಕಿಕೊಂಡು...'

'ನಿಲ್ಸಿ' ಸರ್ರನೆ ಸಿಟ್ಟಿಗೆ ಬಂದಳಾಕೆ.

'ಮತ್ತೇನೂ ಹೇಳಬೇಡಿ. ನನ್ನನ್ನಾಗಲೀ ನನ್ನ ಮಗನನ್ನಾಗಲೀ ಇನ್ಸಲ್ಟ್ ಮಾಡುವ ಹಕ್ಕು ನಿಮಗೆ ಎಳ್ಳಷ್ಟೂ ಇಲ್ಲ. ಫಸ್ಟ್ ಸೇ ಸಾರಿ' ಹುಚ್ಚೆದ್ದವಳಂತೆ ಚೀರಿದಳು.

ನಾನು ಹೆದರಿಬಿಟ್ಟೆ.

ಚಿನ್ನು ಒಂದು ಕ್ಷಣ ನಿಲ್ಲಿಸಿ ನನ್ನತ್ತ ನೋಡಿ ಆಮೇಲೆ ಹಾಗೇ ನೋಡುತ್ತ ಇದ್ದುಬಿಟ್ಟ.

ತುಂಬಾ ಮುಜುಗರ ಅನಿಸಿತು. ಜೀವನದಲ್ಲೇ ಎಂದೂ ಅನಿಸಿರದಷ್ಟು ಮುಜುಗರ. ರೋಷ.

'ಓಕೆ. ನಾನೇನೂ ತಪ್ಪು ಮಾತಾಡಿಲ್ಲ. ಆದರೂ ಸಾರಿ. ಮೊದಲು ಕಾರು ನಿಲ್ಸಿ. ನಾನು ಆಟೊದಲ್ಲಿ ಹೋಗ್ತೀನಿ.'

'ಇಷ್ಟಕ್ಕೂ ಮುಂಚೆ ನನ್ನನ್ನು ಬುದ್ಧಿ ಇಲ್ಲದವಳಂತೆ ಭಾವಿಸಿ ಮಾತಾಡಿದಿರಿ. ಈಗ ಸೌಜನ್ಯ ಇಲ್ಲದವಳಂತೆ ಭಾವಿಸಿ ಮಾತಾಡ್ತಿದೀರಾ? ಏನು ಬೇಕಿಲ್ಲ. ನಿಮ್ಮನ್ನು ನಿಮ್ಮ ಆಫೀಸಿನ ಹತ್ತಿರ ಇಳಿಸಿಯೇ ನಾನು ಹೋಗ್ತೀನಿ. ಕೂತ್ಕೊಳ್ಳಿ' ಆಕೆ ಅಷ್ಟೇ ತೀವ್ರವಾಗಿ ಉತ್ತರಿಸಿದಳು.

ನಾನು ತಲೆ ತಿರುಗಿಸಿದೆ. ಆಕೆ ಮೌನ ಧರಿಸಿದಳು. ಚಿನ್ನು ನೋಡಿ ನೋಡಿ ಮತ್ತೆ ಬೆರಳುಗಳ ಕೆಳಕ್ಕೆ ಮೊಬೈಲ್ ತಂದುಕೊಂಡ.

ಹೊರಗೆ ಮಳೆ ನಿಲ್ಲದೆ ಸುರಿಯುತ್ತಲೇ ಇತ್ತು.

ಆಕಾಶ ದೂರದಲ್ಲಿ ವಿಚಿತ್ರವಾದ ಬೂದಿಯ ಬಣ್ಣದಲ್ಲಿ ಕಂಗೊಳಿಸುತ್ತಿತ್ತು.

ಧಾರೆ.

ಸಮುದ್ರ ಉಕ್ಕಿ ಬರುವುದರೊಂದಿಗೆ ಸಮಯವಲ್ಲದ ಸಮಯದಲ್ಲಿ, ಮಳೆನಕ್ಷತ್ರವಲ್ಲದ ನಕ್ಷತ್ರದಲ್ಲಿ ಸುರಿಯುತ್ತಿರುವ ಅಕಾಲವರ್ಷ.